ನೇಪ್ಪಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು

1514 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರ್ ತಾಲ್ಲೂಕು ನೇಪ್ಪಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ವಿನಂತಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರ ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳುವುದೇ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಸರ್ಕಾರದ ನಿಬಂಧನೆಯ ಲಕ್ಷ ವಂತಿಕ ಹಣ, 2 ಎಕರೆ ಜಮೀನು, ಬಾಡಿಗೆ ರಹಿತ ಕಟ್ಟಡ ನೀಡುವವರಿಗೆ ಭಾರತ ಸರ್ಕಾರದ ಮಾರ್ಗಸೂಚಿಯ ಅನುಸಾರ ಅಂದರೆ ಬಯಲು ಸೀಮೆಯ 30,000 ಜನಸಂಖ್ಯೆಗೆ ಹಾಗೂ ಗುಡ್ಡ ಗಾಡು ಮತ್ತು ಆದಿವಾಸಿ ಪ್ರದೇಶಗಳ 20,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲಾಗುತ್ತಿದ್ದು ಅದರ ಅನುಸಾರ ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ಪ್ರಸ್ತಾವನೆ ಬಂದಲ್ಲಿ ಕ್ರಮತೆಗೆದು ಕೊಳ್ಳಲಾಗುವುದು.

ಮಂಗಳೂರಿನ ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಹೊರಬರುವ ಮಾಲಿನ್ಯ

1561 - ಶ್ರೀ ಕೆ. ಜಯರಾಮ್ ಶೆಟ್ಟಿ (ಉಳ್ಳಾಲ) : ಮಾನ್ಯ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಮಂಗಳೂರಿನಲ್ಲಿರುವ ಎಂ.ಆರ್.ಪಿ.ಎಲ್.ಸಂಸ್ಥೆಯಿಂದ ಹೊರ ಹಾಕಲಾದ ಮಾಲಿನ್ಯ ಪದಾರ್ಥಗಳು ಮಂಗಳೂರಿನ ಸುತ್ತಮುತ್ತ ಕೆಲವು ಬಾವಿಗಳಲ್ಲಿ ಕಂಡು ಬಂದಿರುವ ಬಗ್ಗೆ ರಾಜ್ಯ ಸರಕಾರ ತನಿಖೆ ನಡೆಸಿದೆಯೇ?

ಆ) ತನಿಖೆ ನಡೆಸಿದ್ದರೆ ತನಿಖಾ ವರದಿ ಸಾರಾಂಶ ಏನು?

ಇ) ಹಾಗೂ ಸರಕಾರ ಈ ಬಗ್ಗೆ ಮುಂದೆ ಏನೇನು ಕ್ರಮ ಕೈಗೊಳ್ಳಲಿದೆ?

ಶ್ರೀ ಬಸವರಾಜ್ ನೀ. ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ, ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು) :

ಅ) ಹೌದು

ಆ) ಎಂ.ಆರ್.ಪಿ.ಎಲ್. ಉದ್ದಿಮೆಯ ಈಶಾನ್ಯ ದಿಕ್ಕಿನಲ್ಲಿರುವ ಚಂದ್ರಹಾಸನಗರದಲ್ಲಿರುವ ಕೆಲವು ಭಾವಿಗಳ ನೀರಿನಲ್ಲಿ ತೈಲಾಂಶ ಕಂಡುಬಂದಿರುತ್ತದೆ. ಹಾಗೂ ಈ ಪ್ರದೇಶದಲ್ಲಿ ಉದ್ಭವಿಸಿ ಹರಿಯುವ ಝರಿಯಲ್ಲಿನ ನೀರಿನಲ್ಲಿಯು ಸಹ ತೈಲದ ಅಂಶವು ಕಂಡು ಬಂದಿರುತ್ತವೆ ಝರಿಯ ನೀರು ಕೆಲವೊಮ್ಮೆ ಸ್ವಲ್ಪಮಟ್ಟಿಗೆ ಸೀಮೆಎಣ್ಣೆಯ ವಾಸನೆಯನ್ನು ಹೊಂದಿರುತ್ತದೆ. ಇದು ಉದ್ದಿಮೆಯ ಕಲುಷಿತ ನೀರು ಭೂಮಿಯಲ್ಲಿ ಇಂಗುವಿಕೆಯಿಂದ ಆಗಿರಬಹುದೆಂದು ಶಂಕಿಸಲಾಗಿದೆ.

ಇ) ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಉದ್ದಿಮೆಯ ಕಲುಷಿತ ನೀರು ಇಂಗಿ ಅಂತರ್ಜಲ ಹೊಕ್ಕದಂತೆ ತಡೆಯಲು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ಈ ಪ್ರದೇಶದ SATELLITE IMAGERY ಯನ್ನು ಪಡೆದು ಅಂತರ್ಜಲದ ಚಲನೆ, ಅದರ ಮಾಲಿನ್ಯದ ಬಗ್ಗೆ ಹಾಗೂ ಮೇಲ್ಪದರದ ನೀರಿನ ನಿರ್ವಹಣೆಯ ಬಗ್ಗೆ ಅಭ್ಯಾಶಿಸಿ ವರದಿ ಸಲ್ಲಿಸುವಂತೆ ಉದ್ದಿಮೆಗೆ ಮಂಡಳಿಯು ನಿರ್ದೇಶಿಸಿರುತ್ತದೆ.

2) ಉದ್ದಿಮೆಯ ಕಲುಷಿತ ನೀರು ಅಂತರ್ಜಲವನ್ನು ಹೊಕ್ಕುತ್ತಿರುವ ಮೂಲವನ್ನು ಕಂಡು ಹಿಡಿದು ತಕ್ಷಣ ಕ್ರಮ ಜರುಗಿಸುವಂತೆ ಉದ್ದಿಮೆಗೆ ತಿಳಿಸಲಾಗಿದೆ.

3) ಉದ್ದಿಮೆಯ ಪ್ರದೇಶದಲ್ಲಿ ಕಲುಷಿತ ನೀರು ಹಾಗೂ ಮಳೆಯ ನೀರನ್ನು ಪ್ರತ್ಯೇಕವಾಗಿ ನಿರ್ವಹಿಸುವ ಈಗಿರುವ ವ್ಯವಸ್ಥೆಯನ್ನು ತಕ್ಷಣ ಉತ್ತಮಪಡಿಸಲು ಕ್ರಮ ಕೈಗೊಂಡಿದೆ. ಇದಲ್ಲದೆ ಉದ್ದಿಮೆಯು ಕೆ.ಆರ್.ಇ.ಸಿ. ಯವರಿಂದ ಮಳೆಯ ನೀರಿನ ನಿರ್ವಹಣೆಯ ಅಧ್ಯಯನ ನಡೆಸಲು ಕ್ರಮ ಕೈಗೊಂಡಿದೆ.

ದ.ಕನ್ನಡ ಜಿಲ್ಲೆಯಲ್ಲಿ ನೂತನ ಜಿಲ್ಲಾ ಪಂಚಾಯತ್ ಕಟ್ಟಡ ನಿರ್ಮಾಣ

1517 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನ ಜಿಲ್ಲಾ ಪಂಚಾಯತ್ ಕಟ್ಟಡ ನಿರ್ಮಾಣ ಮಾಡುವ ವಿಚಾರವು ಸರ್ಕಾರದವರ ಗಮನದಲ್ಲಿದೆಯೇ?

ಆ) ಇದ್ದಲ್ಲಿ ಎಲ್ಲಿ ಯಾವಾಗ ಎಷ್ಟು ವೆಚ್ಚದಲ್ಲಿ ನಿರ್ಮಿಸಲಾಗುವುದು?

ಇ) ಜಿಲ್ಲಾ ಪಂಚಾಯತ್‌ನ ಸದಸ್ಯರುಗಳಿಗೆ ಮಾಸಿಕ ವೇತನ ಅಥವಾ ಪರ್ಯಾಯ ಭತ್ಯೆ ನೀಡುವ ವಿಚಾರವು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು